ಡಾ: ಹೆಚ್.ಸಿ.ಮಹದೇವಪ್ಪ : ನಾವು ಅವರನ್ನು ಕರೆದು ಚರ್ಚೆ ಮಾಡಿ ಸಾರ್ವಜನಿಕರಿಗೆ ತೊಂದರೆ ಆಗದ ರೀತಿಯಲ್ಲಿ Motorable condition ಅನ್ನು ತಾತ್ಕಾಲಿಕವಾಗಿ ಮಾಡುವುದು. It is already an approved project. ಅದನ್ನು ಮಾಡುವುದಕ್ಕೆ ಸರ್ಕಾರದ ವತಿಯಿಂದ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ.

6. ವಿಷಯ : ಕುಣಿಗಲ್ ತಾಲ್ಲೂಕಿನ ಲೋಕೋಪಯೋಗಿ ಇಲಾಖೆಯ ಉಪವಿಭಾಗದಿಂದ ಮರಳು ವಿಲೇವಾರಿಯಲ್ಲಿ ಅಕ್ರಮ ನಡೆದಿರುವ ಬಗ್ಗೆ.

ಡಾ: ಹೆಚ್.ಸಿ. ಮಹದೇವಪ್ಪ (ಮಾನ್ಯ ಲೋಕೋಪಯೋಗಿ ಸಚಿವರು):- ಮಾನ್ಯ ಅಧ್ಯಕ್ಷರೆ, ತಹಶೀಲ್ದಾರ್, ಕುಣಿಗಲ್ ಇವರು, ಕುಣಿಗಲ್ ತಾಲ್ಲೂಕಿನ ಹುಲಿಯೂರುದುರ್ಗ ಹೋಬಳಿಯ ಕೊಡವತ್ತಿ, ಹನುಮಂತನಗರ, ತೊರಬೊಮ್ಮನಹಳ್ಳಿಯ ಬಳಿ ಅನಧಿಕೃತವಾಗಿ ಶೇಖರಣೆ ಮಾಡಿರುವ ಸುಮಾರು ಒಟ್ಟು 18890 ಮೆ.ಟನ್. (10494.45 ಘ.ಮೀ) ಮರಳನ್ನು ಮುಟ್ಟುಗೋಲು ಹಾಕಿಕೊಂಡು ಸ್ವಾಧೀನಕ್ಕೆ ತೆಗೆದುಕೊಂಡಿರುವ ಮರಳನ್ನು ಲೋಕೋಪಯೋಗಿ ಉಪವಿಭಾಗ, ಕುಣಿಗಲ್ ಇವರಿಗೆ ಹಸ್ತಾಂತರಿಸಲಾಗಿರುತ್ತದೆ.

ಮೇಲ್ಕಾಣಿಸಿದ ಮರಳನ್ನು ವಿಲೇವಾರಿಯಾಗುವತನಕ ರಕ್ಷಿಸಲು ಗೃಹ ರಕ್ಷಕ ದಳದವರನ್ನು ನೇಮಿಸಿಕೊಳ್ಳುವಂತೆ ಜಿಲ್ಲಾ ಮರಳು ಉಸ್ತುವಾರಿ ಸಮಿತಿ ಅಧ್ಯಕ್ಷರಾದ ಜಿಲ್ಲಾಧಿಕಾರಿಗಳು ಸೂಚಿಸಿದಂತೆ ಪೊಲೀಸ್ ಮಹಾನಿರ್ದೇಶಕರು, ಗೃಹ ರಕ್ಷಕ ದಳ ಮತ್ತು ಪೌರ ರಕ್ಷಣಾ ಕೇಂದ್ರ ಕಚೇರಿ, ಬೆಂಗಳೂರು ಇವರಿಗೆ ಕಾರ್ಯಪಾಲಕ ಇಂಜಿನಿಯರ್ ತುಮಕೂರು ವಿಭಾಗ ಇವರು ಗೃಹ ರಕ್ಷಕ ಸಿಬ್ಬಂದಿಯನ್ನು ಒದಗಿಸುವಂತೆ ದಿನಾಂಕ 20.10.2012 ರಲ್ಲಿ ಕೊರಿರುತ್ತಾರೆ.

ಮರಳಿನ ಸುರಕ್ಷತೆಯು ವಾಸ್ತವಿಕವಾಗಿ ತುಂಬಾ ಕಷ್ಟದಾಯಕವಾದ ಕೆಲಸವಾಗಿದ್ದು, ಇಲಾಖೆಯ ಶಾಖಾಧಿಕಾರಿಗಳು ಮತ್ತು ರಸ್ತೆ ಗ್ಯಾಂಗ್ ಸಿಬ್ಬಂದಿಯನ್ನು ಮರಳು ಸುರಕ್ಷತೆಗಾಗಿ ನಿಯೋಜಿಸಲಾಗಿರುತ್ತದೆ. ಮತ್ತು ಮರಳು ಮಾಫಿಯಾದವರಿಂದ ತೀವ್ರ ತರವಾದ ಗಲಾಟೆಗಳು ಹಾಗೂ ಪ್ರಾಣ ಬೆದರಿಕೆ ಕರೆಗಳು ಬರುತ್ತಿರುವ ಹಿನ್ನೆಲೆಯಲ್ಲಿ ಹಾಗೂ ಮರಳು ಸುರಕ್ಷೆ ಕಾರ್ಯಕ್ಕಾಗಿ ತೊರೆಬೊಮ್ಮನಹಳ್ಳಿಯಲ್ಲಿ ನೇಮಿಸಿದ್ದ ಶ್ರೀ ಬೋರೇಗೌಡ, ಗ್ಯಾಂಗ್‌ಮನ್ ರವರಿಗೆ ದಿನಾಂಕಃ 28-10-2012 ರಂದು ಮರಳು ಮಾಫಿಯಾದವರು ತೀವ್ರ ಹಲ್ಲೆ ನಡೆಸಿರುವ ಬಗ್ಗೆ ವರದಿ ಮಾಡುತ್ತಾ, ಸಂಗ್ರಹಣೆ ಮಾಡಿರುವ ಮರಳು

ಖಾಸಗಿ ಜಾಗವಾಗಿದ್ದು, ಸದರಿ ಖಾಸಗಿ ಜಮೀನಿನ ಮಾಲೀಕರ ವಿರುದ್ಧ ಅಗತ್ಯ ಕ್ರಮ ಕೈಗೊಂಡು ಸೂಕ್ತ ಮೊತ್ತದ ದಂಡ ವಿಧಿಸುವುದರ ಮೂಲಕ ಅಥವಾ ಬಹಿರಂಗ ಹರಾಜು ಮುಖಾಂತರ ಮರಳನ್ನು ವಿಲೇವಾರಿ ಮಾಡಲು ತೀರ್ಮಾನ ಕೈಗೊಳ್ಳುವಂತೆ ಜಿಲ್ಲಾ ಉಸ್ತುವಾರಿ ಸಮಿತಿಯ ಅಧ್ಯಕ್ಷರಾದ ಜಿಲ್ಲಾಧಿಕಾರಿಗಳಿಗೆ ದಿನಾಂಕಃ 23.11.12 ರಲ್ಲಿ ಕಾರ್ಯಪಾಲಕ ಇಂಜಿನಿಯರ್ ರವರು ಪತ್ರ ಬರೆದಿರುತ್ತಾರೆ.

ಈ ಎಲ್ಲಾ ಕ್ರಮಗಳ ಮಧ್ಯೆಯೂ ಅನಧಿಕೃತವಾಗಿ ಶೇಖರಣೆ ಮಾಡಿರುವ ಮರಳು ವಿಲೇವಾರಿಗೆ ಲೋಕೋಪಯೋಗಿ ಇಲಾಖೆಯ ವತಿಯಿಂದ ಸೂಕ್ತ ಕ್ರಮ ಕೈಗೊಂಡು ಮರಳು ಖರೀದಿಗಾಗಿ ಹಣ ಪಾವತಿ ಮಾಡಿದ್ದ ಮೂರು ಜನರಿಗೆ ಮರಳು ವಿಲೇವಾರಿ ಮಾಡುವ ಸಂದರ್ಭದಲ್ಲಿ ಊರಿನ ಗ್ರಾಮಸ್ಥರು ಗಲಾಟೆ ಮಾಡಿರುತ್ತಾರೆ. ಈ ಗಲಾಟೆಯ ನಂತರ ಮರಳು ಖರೀದಿಗೆ ಹಾಗೂ ಮರಳು ತುಂಬಿಸಲು ಯಾರೂ ಮುಂದೆ ಬರುತ್ತಿಲ್ಲವಾದ ಕಾರಣ ಸಂಗ್ರಹಣೆಯಾಗಿರುವ ಮರಳನ್ನು ವಿಲೇವಾರಿ ಮಾಡುವುದು ಕಷ್ಟವಾಗಿರುತ್ತದೆ.

ಆದಾಗ್ಯೂ ಒಟ್ಟು **1898.91** ಘನ ಮೀಟರ್ ಮರಳನ್ನು ವಿಲೇವಾರಿ ಮಾಡಲಾಗಿದೆ. ಈ ಮಾರಾಟದಿಂದ ರೂ. **18,03,964.00** ಮೊತ್ತ ಜಮೆ ಆಗಿರುತ್ತದೆ.

2011ರ ಮರಳು ನೀತಿ ಪ್ರಕಾರ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿತವಾಗಿರುವ ಜಿಲ್ಲಾಮರಳು ಉಸ್ತುವಾರಿ ಸಮಿತಿ ಮೂಲಕ ಅಕ್ರಮ ಮರಳು ಗಣಿಗಾರಿಕೆಯನ್ನು ತಡೆಲು ಅಗತ್ಯವಿರುವ ಎಲ್ಲಾ ಕ್ರಮಗಳನ್ನು ಕೈಗೊಳ್ಳಬೇಕಾಗಿದ್ದು ಈ ಜವಾಬ್ದಾರಿಯು ಎಲ್ಲ ಸಮಿತಿಯ ಸದಸ್ಯರದ್ದಾಗಿರುತ್ತದೆ. ಮರಳು ಸುರಕ್ಷಾ ಕಾರ್ಯವು ಅತ್ಯಂತ ಕಷ್ಟಕರವಾಗಿದ್ದು, ಪೊಲೀಸ್ ಇಲಾಖೆಯ ಸಹಾಯವಿಲ್ಲದೇ ಕೇವಲ ಲೋಕೋಪಯೋಗಿ ಇಲಾಖೆಯ ವತಿಯಿಂದಲೇ ನಿರ್ವಹಿಸುವುದು ಕಷ್ಟಕರವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳು ಮಾತ್ರ ಜವಾಬ್ದಾರರಾಗುವುದಿಲ್ಲ. ಈ ಪ್ರಕರಣದಲ್ಲಿ ಮುಟ್ಟುಗೋಲು ಹಾಕಿಕೊಳ್ಳುವ ಸಮಯದಲ್ಲಿ ಅಂದಾಜಿಸಲಾದ ಮರಳಿನ ಪ್ರಮಾಣದಲ್ಲಿ ನಿಖರತೆ ಇಲ್ಲದಿರುವುದರಿಂದ ಹಾಗೂ ಪ್ರಸ್ತುತ ಸ್ಥಳದಲ್ಲಿ ಲಭ್ಯವಿರುವ ಮರಳಿನ

ಪ್ರಮಾಣವನ್ನು ಅಂದಾಜಿಸಿಲ್ಲವಾದ್ದರಿಂದ ನಿಖರವಾಗಿ ಇಷ್ಟೇ ಪ್ರಮಾಣದ/ ಮೊತ್ತದ ಅಕ್ರಮ ನಡೆದಿದೆಯೆಂದು ಅಂದಾಜಿಸಲು ಸಾಧ್ಯವಾಗುವುದಿಲ್ಲ.

ವಶಪಡಿಸಿಕೊಂಡು ಶೇಖರಿಸಿದ್ದ ಮರಳನ್ನು ಲೋಕೋಪಯೋಗಿ ಇಲಾಖೆಯಿಂದ ಜಿಲ್ಲಾ ಉಸ್ತುವಾರಿ ಸಮಿತಿಯಲ್ಲಿ ನಿಗದಿಪಡಿಸಿದ ದರದಂತೆ ಮಾರಾಟ ಮಾಡಲು ಕ್ರಮ ಕೈಗೊಳ್ಳಲಾಗಿರುತ್ತದೆ. ಈ ಸಂದರ್ಭದಲ್ಲಿ ಸ್ಥಳೀಯ ಗ್ರಾಮಸ್ಥರಿಂದ ಗಲಾಟೆ ನಡೆದ ಕಾರಣ ಪೂರ್ಣ ಮರಳನ್ನು ವಿಲೇವಾರಿ ಮಾಡಲಾಗಿರುವುದಿಲ್ಲ. ಪ್ರಸ್ತುತ ಇರುವ ಮರಳನ್ನು ವಿಲೇವಾರಿ ಮಾಡಲು ಜಿಲ್ಲಾ ಉಸ್ತುವಾರಿ ಸಮಿತಿಯ ಅಧ್ಯಕ್ಷರಾದ ಜಿಲ್ಲಾಧಿಕಾರಿಗಳಿಗೆ ಉಸ್ತುವಾರಿ ಸಮಿತಿಯಲ್ಲಿ ಚರ್ಚಿಸಿ ಕ್ರಮ ಕೈಗೊಳ್ಳಲು ಸೂಚಿಸಲಾಗುವುದು; ಹಾಗೂ ಇಲಾಖೆಯ ಅಧಿಕಾರಿಗಳ ಕರ್ತವ್ಯಲೋಪದ ಬಗ್ಗೆ ತನಿಖೆ ನಡೆಸಲಾಗುವುದು.

ಮರಳು ನೀತಿಯನ್ನು ಪರಿಣಾಮಕಾರಿಯಾಗಿ ಹಾಗೂ ಸಮಗ್ರವಾಗಿ ಅನುಷ್ಠಾನಗೊಳಿಸಲು ಕ್ರಮ ತೆಗೆದುಕೊಳ್ಳಲಾಗುವುದು.

ಅಧ್ಯಕ್ಷರು : ನಾಗರಾಜಯ್ಯ, ಸಂಕ್ಷಿಪ್ತವಾಗಿ ಹೇಳಿ.

ಶ್ರೀ ಡಿ.ನಾಗರಾಜಯ್ಯ (ಕುಣಿಗಲ್) : ಸನ್ಮಾನ್ಯ ಅಧ್ಯಕ್ಷರೆ, ಇದು ಸಂಕ್ಷಿಪ್ತವಾಗಿ ಹೇಳುವಂಥದ್ದಲ್ಲ, ಸುಮಾರು 1 ಕೋಟಿ ರೂಪಾಯಿ ಚಿಲ್ಲರೆ ಹಣವನ್ನು PWD ಇಲಾಖೆಯ ಅಧಿಕಾರಿಗಳು ದುರುಪಯೋಗ ಪಡಿಸಿಕೊಂಡಿರುವ ಕುರಿತು ಈ ಪ್ರಶ್ನೆ ಬಂದಿರುವುದು. ತಾರೀಖು 18.08.2012ನೇ ಇಸವಿಯಲ್ಲಿ ಸುಮಾರು 104 ಲಕ್ಷ ರೂಪಾಯಿ ಮೌಲ್ಯದ ಮರಳನ್ನು ರೈತರುಗಳು, ಕಳ್ಳ ಮಾರಾಟ ಮಾಡುವಂಥ ದಂಧೆಕೋರರು ಆ ಮರಳನ್ನು ಶೇಖರಣೆ ಮಾಡಿ ಮಾರಿದಂಥ ಮರಳನ್ನು ನಮ್ಮ ತಾಲ್ಲೂಕಿನ ತಹಸೀಲ್ದಾರರು, ಪೊಲೀಸ್ ಅಧಿಕಾರಿಗಳು, Mines & Geology ಅಧಿಕಾರಿಗಳು ಮತ್ತು ಇಂಜಿನಿಯರಿಂಗ್ ಇಲಾಖೆಯ ಅಧಿಕಾರಿಗಳು ಇವರಿಷ್ಟೂ ಜನ ಸೇರಿ ಮರಳನ್ನು seize ಮಾಡಿದರು, 18,890 ಮೆಟ್ರಿಕ್ ಟನ್ ಮರಳನ್ನು seize ಮಾಡಿದರು. Seize ಮಾಡಿದಂಥ ಮರಳನ್ನು ಅಂದೇ PWD ಇಲಾಖೆಯ Assistant Executive Engineer ವಶಕ್ಕೆ ಕೊಟ್ಟರು. ಯಾವ ಆಧಾರದ ಮೇಲೆ ವಶಕ್ಕೆ ಕೊಟ್ಟರು? ಜಿಲ್ಲಾಧಿಕಾರಿಗಳ ಆದೇಶದ ಮೇರೆಗೆ, ಈ ಮರಳನ್ನು ವಿಲೇವಾರಿ ಮಾಡುವುದಕ್ಕೆ ಹೇಳಿ ಅವರಿಗೆ ವಶಕ್ಕೆ ಕೊಟ್ಟಿದ್ದು, ಅವತ್ತು ಅವರು 1 ಕೋಟಿ 4 ಲಕ್ಷ ರೂಪಾಯಿ ಚಿಲ್ಲರೆ ಹಣ ಮರಳಿನ ಬೆಲೆ ಎಂದು

ನಿಗದಿಪಡಿಸಿದರು. ಅದನ್ನು ಸುಮಾರು ದಿವಸಗಳಿಂದ ಇಂಜಿನಿಯರ್ ವಶದಲ್ಲಿದ್ದಂಥ ಮರಳನ್ನು ನಮ್ಮ AEE ವಿಲೇ ಮಾಡಿದ್ದು ಕೇವಲ 18 ಲಕ್ಷದ 3 ಸಾವಿರ ರೂಪಾಯಿಗಳ ಚಿಲ್ಲರೆ ಬೆಲೆಗೆ ವಿಲೇವಾರಿ ಮಾಡಿದರು. ಉಳಿಕೆ 85 ಲಕ್ಷ ರೂಪಾಯಿ ಚಿಲ್ಲರೆ ಬೆಲೆಯ ಮರಳನ್ನು ವಿಲೇವಾರಿ ಆಗದೆ ಇರುವುದು, ಸ್ಥಳದಲ್ಲಿ ಮರಳು ಇಲ್ಲದೇ ಇರುವುದು, ಇವತ್ತು ಅವರು ಕೊಟ್ಟಿರುವಂಥ. . . .

ಅಧ್ಯಕ್ಷರು : ಈಗ ಅವರು ಒಂದು statement ಕೊಟ್ಟಿದ್ದಾರೆ. ಅದರಲ್ಲಿ ಏನಾದರೂ discrepancy ಇದ್ದರೆ ಕೇಳಿ, ವಿವರವಾಗಿ ಎಲ್ಲಾ ಕೊಟ್ಟಿದ್ದಾರೆ. ಅದರಲ್ಲಿ ಏನಾದರೂ ತಪ್ಪು ಇದೆಯೇ?

ಶ್ರೀ ಡಿ.ನಾಗರಾಜಯ್ಯ : ಅದನ್ನೇ ನಾನು ಹೇಳುತ್ತಿರುವುದು, ಅವರು ಏನೇನು ಕೊಟ್ಟಿದ್ದಾರೆಯೋ ಅದೆಲ್ಲಾ ತಪ್ಪು, ಇವತ್ತು ಅವರು ಕೊನೆ ಹಂತದಲ್ಲಿ ಹೇಳುತ್ತಿದ್ದಾರೆ. ಮರಳನ್ನು ವಿಲೇವಾರಿ ಮಾಡಿರುವುದಿಲ್ಲವೆಂದು ಹೇಳುತ್ತಿದ್ದಾರೆ. ನಾಳೆಗೆ ನಮ್ಮ ಸಚಿವರು ಸ್ಥಳ ತನಿಖೆಗೆ ಬರಲಿ ಅಥವಾ ಸಚಿವರು ಅವರ ಅಧಿಕಾರಿಗಳನ್ನು ಕಳುಹಿಸಿ ಕೊಡಲಿ, ಸ್ಥಳ ಪರಿಶೀಲನೆ ಮಾಡಲಿ, ಆ ಸ್ಥಳದಲ್ಲಿ ಏನಾದರೂ 1 ಕೆ.ಜಿ. ಮರಳು ಇದೆಯೆಂದು ಹೇಳುವುದಾದರೆ ಅವರು ಕೊಟ್ಟಿರುವ ಉತ್ತರ ಸರಿ ಎಂದು ಭಾವಿಸೋಣ. ಇವತ್ತು ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಿರುವಂಥದ್ದು, 1 ಕೆ.ಜಿ. ಮರುಳು ಅಲ್ಲಿ ಇಲ್ಲದೇ ಇರುವುದು, 1 ಕೋಟಿ 4 ಲಕ್ಷ ರೂಪಾಯಿ ಹಣಕ್ಕೆ ಕೇವಲ 18 ಲಕ್ಷ ರೂಪಾಯಿ ಬಂದಿದೆ ಎಂದರೆ, ಆ 18 ಲಕ್ಷ ರೂಪಾಯಿ ಹಣದಲ್ಲಿ ಮರಳನ್ನು ಕಾಯುತ್ತಿದ್ದಂಥವರಿಗೆ, ಶೆಡ್ ಹಾಕುವುದಕ್ಕೆ, ಮತ್ತೆ ಮತ್ತೊಂದಕ್ಕೆ 8 ಲಕ್ಷ ರೂಪಾಯಿ ಖರ್ಚಾಗಿರುವುದು ಕೇವಲ 10 ಲಕ್ಷ ರೂಪಾಯಿ ಸರ್ಕಾರಕ್ಕೆ ಬಂದಿರುವುದು, ಉಳಿಕೆ ಮರಳು ಏನಾಯಿತು? ಹಣ ಎಲ್ಲಿ ದುರುಪಯೋಗ ಆಯಿತು? ಅವರು ಹೇಳುತ್ತಾರೆ, , , , ,

ಅಧ್ಯಕ್ಷರು : ಇಲ್ಲಿ ಉತ್ತರದ ಕೊನೆ ಪ್ಯಾರಾದಲ್ಲಿ ಹೇಳಿದ್ದಾರೆ ನೋಡಿ, "ವಶಪಡಿಸಿಕೊಂಡು ಶೇಖರಿಸಿದ್ದ ಮರಳನ್ನು ಲೊಕೋಪಯೋಗಿ ಇಲಾಖೆಯಿಂದ ಜಿಲ್ಲಾ ಉಸ್ತುವಾರಿ ಸಮಿತಿಯಲ್ಲಿ ನಿಗದಿಪಡಿಸಿದ ದರದಂತೆ ಮಾರಾಟ ಮಾಡಲು ಕ್ರಮ ಕೈಗೊಳ್ಳಲಾಗಿರುತ್ತದೆ."

ಶ್ರೀ ಡಿ. ನಾಗರಾಜಯ್ಯ : ಸ್ವಾಮಿ, ಅಲ್ಲಿ ಮರಳೇ ಇಲ್ಲ. ಆ spotನಲ್ಲಿ ಮರಳೇ ಇಲ್ಲ.

ಶ್ರೀ ಹೆಚ್.ಸಿ.ಬಾಲಕೃಷ್ಣ : ಅಧ್ಯಕ್ಷರೆ, ಇದರ ಮೇಲೆ ನಾನು ಸ್ವಲ್ಪ ಹೇಳುತ್ತೇನೆ. ಎರಡೇ ನಿಮಿಷ. . . .

ಅಧ್ಯಕ್ಷರು : ಅಯ್ಯೋ ರಾಮ, ಹೇಳಿದ್ದೇ ಹೇಳುವುದು ಎಂದರೆ . . . .

ಶ್ರೀ ಹೆಚ್.ಸಿ.ಬಾಲಕೃಷ್ಣ: ಅಧ್ಯಕ್ಷರೆ, ಹೇಳಿದ್ದನ್ನೇ ಹೇಳುವುದಿಲ್ಲ. ಒಂದೇ ನಿಮಿಷ ನಾನು ಹೇಳುತ್ತೇನೆ. ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ, ಬಹಳ ಚೆನ್ನಾಗಿ ಉತ್ತರ ಕೊಟ್ಟಿದ್ದಾರೆ. ಇಲ್ಲಿ 18,890 ಮೆಟ್ರಿಕ್ ಟನ್ ಮರಳನ್ನು ಮುಟ್ಟುಗೋಲು ಹಾಕಿಕೊಂಡು AEE ಅವರ ವಶಕ್ಕೆ, ಎರಡೇ ನಿಮಿಷ. . . . .

ಅಧ್ಯಕ್ಷರು : ಅಯ್ಯೋ ಬಾಲಕೃಷ್ಣ, ನಾನು ಹೇಳುವುದನ್ನು ಸ್ವಲ್ಪ ಕೇಳಿ. ಇಲ್ಲಿ ನಾಗರಾಜಣ್ಣರವರು ಹೇಳುವ ಪ್ರಕಾರ, "ಇವರು ಹೇಳುತ್ತಾರೆ, ನಿಗದಿಪಡಿಸಿದ ದರದಂತೆ ಮಾರಾಟ ಮಾಡಲು ಕ್ರಮ ಕೈಗೊಳ್ಳಲಾಗಿರುತ್ತದೆ". ಮರಳೇ ಇಲ್ಲ ಎಂದ ಮೇಲೆ ಮರಳನ್ನು ಮಾರಾಟ ಮಾಡುವ ಪ್ರಶ್ನೆ ಇಲ್ಲ.

ಶ್ರೀ ಹೆಚ್.ಸಿ.ಬಾಲಕೃಷ್ಣ: ಅದು ಆ ರೀತಿ ಅಲ್ಲ, ನೀವು ತಪ್ಪು ತಿಳಿದುಕೊಂಡಿದ್ದೀರಿ. ಅದನ್ನೇ ಒಂದು ನಿಮಿಷ ಹೇಳುತ್ತೇನೆ. ಸನ್ಮಾನ್ಯ ಮಂತ್ರಿಗಳೇ, ದಯಮಾಡಿ ಇದನ್ನು ಕೇಳಬೇಕು. ಬಹಳ ಚೆನ್ನಾಗಿ ಉತ್ತರ ಕೊಟ್ಟಿದ್ದೀರಿ ನೀವು. ಇದೂ ಸಹ ಒಂದು ಬೇಲೆಕೇರಿ ಅದಿರು ಪ್ರಕರಣ ಇದ್ದಂತೆ. 18.890 ಮೆಟ್ರಿಕ್ ಟನ್ ಮರಳನ್ನು ಮುಟ್ಟುಗೋಲು ಹಾಕಿಕೊಂಡಿರುವುದಾಗಿ ನೀವೇ ಹೇಳಿದ್ದೀರಿ, ನಿಮ್ಮ ತಹಶೀಲ್ದಾರ್‌ರವರು ಹೇಳಿದ್ದಾರೆ. ಅಧ್ಯಕ್ಷರೆ, ಹಿಂದೆ ಉತ್ತರದಲ್ಲಿ ನೋಡಿ, ಇವರು ಎಷ್ಟು ಚೆನ್ನಾಗಿ ಕೊನೆಯಲ್ಲಿ ಉತ್ತರ ಕೊಟ್ಟಿದ್ದಾರೆಂದರೆ "ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳು ಮಾತ್ರ ಜವಬ್ದಾರರಾಗುವುದಿಲ್ಲ". ಹಾಗಾದರೆ, ತಹಶೀಲ್ದಾರ್ ಯಾರಿಗೆ ಜವಾಬ್ದಾರಿ ಕೊಟ್ಟಿದ್ದೀರಿ ನೀವು, ಲೋಕೋಪಯೋಗಿ ಇಲಾಖೆಯ AEE ಜವಬ್ದಾರಿ ಕೊಟ್ಟಿದ್ದೀರಿ. ಇನ್ನು ಮುಂದುವರೆಸುತ್ತಾ " ಈ ಪ್ರಕರಣದಲ್ಲಿ ಮುಟ್ಟುಗೋಲು ಹಾಕಿಕೊಳ್ಳುವ ಸಮಯದಲ್ಲಿ ಅಂದಾಜಿಸಲಾದ ಮರಳಿನ ಪ್ರಮಾಣದಲ್ಲಿ ನಿಖರತೆ ಇಲ್ಲದಿರುವುದರಿಂದ", ಸ್ವಾಮಿ ನಿಮ್ಮ ಉತ್ತರದ ಮೊದಲನೇ ಪುಟದಲ್ಲಿ "18,890 ಮೆಟ್ರಿಕ್ ಟನ್ ಮುಟ್ಟುಗೋಲು ಹಾಕಿಕೊಂಡಿದ್ದೇವೆಂದು", ಆದರೆ ಉತ್ತರದ ಹಿಂದಿನ ಪುಟದಲ್ಲಿ "ಮರಳಿನ ಪ್ರಮಾಣದಲ್ಲಿ ನಿಖರತೆ ಇಲ್ಲ" ಎಂದರೆ ಯಾರನ್ನು ನೀವು ಉಳಿಸುವುದಕ್ಕೆ ಹೊರಟಿದ್ದೀರಿ? ನಿಮ್ಮ ರಾಜ್ಯಪಾಲರ ಉತ್ತರದಲ್ಲಿ ನೀವು ಏನು ಹೇಳಿದ್ದೀರಿ, ಭ್ರಷ್ಟಾಚಾರ ಮುಕ್ತ . . . .

ಅಧ್ಯಕ್ಷರು : ಆಯಿತು, ಅಲ್ಲಿವರೆಗೂ ಬೇಡ, ನೀವು ಹೇಳುತ್ತಿರುವುದು correct.

ಶ್ರೀ ಹೆಚ್.ಸಿ.ಬಾಲಕೃಷ್ಣ: ಮಾನ್ಯ ಅಧ್ಯಕ್ಷರೆ, ಮಾನ್ಯ ಶಾಸಕರು ತಾಲ್ಲೂಕು ಮಟ್ಟದ ಮೀಟಿಂಗ್ ಕರೆದರೆ, PWD AEE ಏನು ಹೇಳುತ್ತಾರೆಂದರೆ, "ರೀ, ನೀವು ನನ್ನನ್ನು ಏನು ಬೇಕಾದರೂ ಮಾಡಿಕೊಳ್ಳಿ. ನಾನು ಮಾಡಿದ್ದೇನೆ. ನೀವು ಏನು ಬೇಕಾದರೂ ದಕ್ಕಿಸಿಕೊಳ್ಳಿ " ಎಂದು ಹೇಳುತ್ತಾರೆ.

ಅಧ್ಯಕ್ಷರು : ಹಾಗಿದ್ದರೆ, ಒಂದು ಕೆಲಸ ಮಾಡಿ. ಅವನು ಆ statement ಕೊಟ್ಟಿದ್ದಾನಲ್ಲ, you put it in writing.

ಶ್ರೀ ಹೆಚ್.ಸಿ.ಬಾಲಕೃಷ್ಣ : Yes, ಕೊಡುತ್ತೇವೆ.

ಅಧ್ಯಕ್ಷರು : Give it. Sack him.

ಶ್ರೀ ಡಿ.ನಾಗರಾಜಯ್ಯ : ಸನ್ಮಾನ್ಯ ಅಧ್ಯಕ್ಷರೆ, ಈ ತಿಂಗಳ 3ನೇ ತಾರೀಖು ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಮತ್ತು ಲೋಕೋಪಯೋಗಿ ಸಚಿವರಿಗೆ enquiry ಮಾಡಿ ಎಂದು ಪತ್ರ ಕೊಟ್ಟಿದ್ದೇನೆ. ದಿನಾಂಕ:03-06-2013ರಲ್ಲಿ ಕೊಟ್ಟಿರುವಂಥದ್ದು, ಈ ಘಳಿಗೆವರೆಗೂ ಆ ಪತ್ರ ಏನಾಗಿದೆ ಎಂದು ಗೊತ್ತಿಲ್ಲ.

ಡಾ: ಹೆಚ್.ಸಿ.ಮಹದೇವಪ್ಪ : ಮಾನ್ಯ ಅಧ್ಯಕ್ಷರೆ, ಸರ್ಕಾರ ಯಾರನ್ನೂ ಉಳಿಸುವುದಕ್ಕೆ ರಕ್ಷಣೆ ಮಾಡುವುದಕ್ಕೆ ಪ್ರಯತ್ನ ಮಾಡುವುದಿಲ್ಲ. . . .

ಅಧ್ಯಕ್ಷರು : ಒಳ್ಳೆಯದು.

ಡಾ: ಹೆಚ್.ಸಿ.ಮಹದೇವಪ್ಪ : ಅಥವಾ ಅಲ್ಲಿರುವಂಥ ಯಾರನ್ನಾದರೂ ತೆಗೆದು ಹಾಕಬೇಕೆನ್ನುವ ಉದ್ದೇಶಕ್ಕೂ ಬೆಂಬಲ ಇರುವುದಿಲ್ಲ. ಅಲ್ಲಿ fact ಏನಿದೆ, ಏನು ಅವರು ದೂರು ಹೇಳುತ್ತಿದ್ದಾರೆ, I will get it enquired thoroughly.

ಅಧ್ಯಕ್ಷರು : Through

ಡಾ: ಹೆಚ್.ಸಿ.ಮಹದೇವಪ್ಪ : Through a Competent Authority. . . .

ಅಧ್ಯಕ್ಷರು : Let our Chief Engineer go there and verify that.

ಡಾ: ಹೆಚ್.ಸಿ.ಮಹದೇವಪ್ಪ : I said, I will get it enquired through a Competent Authority. ಸರ್ ತಾವೇ ಹೇಳಿ ಏನು ಮಾಡಬೇಕು? When I said. . . .

ಅಧ್ಯಕ್ಷರು :– The Hon'ble Member has made a serious allegation.

(ಗೊಂದಲ)

ಡಾ: ಹೆಚ್.ಸಿ.ಮಹದೇವಪ್ಪ : ಸರ್, ತಾವು ಕೇಳಿ ಸರ್, ಈ ಪ್ರಶ್ನೆಗಳು ಬಂದ ತಕ್ಷಣವೇ, ನಮ್ಮ ಅಧಿಕಾರಿಗಳು...

ಶ್ರೀ ಹೆಚ್.ಸಿ.ಬಾಲಕೃಷ್ಣ : ಹಾಗಿದ್ದಲ್ಲಿ, ಲೋಕಾಯುಕ್ತಕ್ಕೆ refer ಮಾಡಿಸುವುದಕ್ಕೆ ಹೇಳಿ ಅಧ್ಯಕ್ಷರೆ, ಲೋಕಾಯುಕ್ತಕ್ಕೆ refer ಮಾಡಿಸಿ ಸ್ವಾಮಿ. ನಾವು ತಪ್ಪು ಮಾಡಿದ್ದರೆ ದಂಡ ಕೊಡುತ್ತೇವೆ. ನಾವು ಸುಳ್ಳು ಮಾಹಿತಿ ಕೊಟ್ಟಿದ್ದರೆ ದಂಡ ಕೊಡುತ್ತೇವೆ.

ಡಾ: ಹೆಚ್.ಸಿ.ಮಹದೇವಪ್ಪ : ನೀವು ದಂಡ ಕೊಡಿ ಎಂದು ನಾವು ಕೇಳೇ ಇಲ್ಲ.

ಶ್ರೀ ಹೆಚ್.ಸಿ.ಬಾಲಕೃಷ್ಣ : ನೀವು ಲೋಕಾಯುಕ್ತಕ್ಕೆ ಕೊಡಿ. ನಮ್ಮನ್ನು ತಪ್ಪಿತಸ್ಥರೆಂದರೆ ನಾವು ದಂಡ ಕೊಡುತ್ತೇವೆ.

ಡಾ: ಹೆಚ್.ಸಿ.ಮಹದೇವಪ್ಪ : ನೀವು ದಂಡ ಕೊಡಿ ಎಂದು ನಾವು ಕೇಳೇ ಇಲ್ಲ. ಅವರು ಏಕೆ ಕೊಡುತ್ತಾರೆ?

ಅಧ್ಯಕ್ಷರು : ಸಾಕು ರೀ. . . .

ಡಾ: ಹೆಚ್.ಸಿ.ಮಹದೇವಪ್ಪ : Government will get it done.

ಶ್ರೀ ಹೆಚ್.ಸಿ.ಬಾಲಕೃಷ್ಣ : ಅಧ್ಯಕ್ಷರೆ, ಇಲ್ಲಿ ಒಂದು ಮಾತು ಹೇಳುತ್ತಾರೆ, " ಈ ಹಿನ್ನೆಲೆಯಲ್ಲಿ ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳು ಮಾತ್ರ ಜವಾಬ್ದಾರರಾಗುವುದಿಲ್ಲ " ಅಂದರೆ ಅರ್ಥವೇನು? AEE ಗೆ ಜವಾಬ್ದಾರಿ ಕೊಟ್ಟ ಮೇಲೆ.

(ಗೊಂದಲ)

ಶ್ರೀ ಹೆಚ್.ಸಿ.ಬಾಲಕೃಷ್ಣ : ಮಾರಾಟ ಮಾಡುವುದಕ್ಕೆ ಜವಾಬ್ದಾರಿ ಕೊಟ್ಟ ಮೇಲೆ, ಯಾರನ್ನು ಉಳಿಸುವುದಕ್ಕೆ ಹೊರಟಿದ್ದೀರಿ ನೀವು?

ಡಾ: ಹೆಚ್.ಸಿ.ಮಹದೇವಪ್ಪ : ಮರಳು ನೀತಿಗೆ ಮತ್ತು ಅದರ ನಿಯಂತ್ರಣಕ್ಕೆ . . .

ಶ್ರೀ ಹೆಚ್.ಸಿ.ಬಾಲಕೃಷ್ಣ : ಹಾಗಾದರೆ ನೀವು ಯಾರಿಗೆ ಜವಾಬ್ದಾರಿ ಕೊಟ್ಟಿದ್ದೀರಿ?

ಡಾ: ಹೆಚ್.ಸಿ.ಮಹದೇವಪ್ಪ: ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಉಸ್ತುವರಿ ಸಮಿತಿ ಇದೆ. ಇಲ್ಲಿ ಈ ತರಹದ ಮರಳಿಲ್ಲ, ಇಷ್ಟೊಂದು ಅವ್ಯವಹಾರ ಆಗಿದೆ ಎಂದ ಮೇಲೆ through a proper Authority I will get it enquired.

(ಗೊಂದಲ)

ಶ್ರೀ ಹೆಚ್.ಸಿ.ಬಾಲಕೃಷ್ಣ: ಅಧ್ಯಕ್ಷರೆ, ನಾನು ಹೇಳುತ್ತೇನೆ ಸ್ವಲ್ಪ ಕೇಳಿ. ಯಾವ Authority ಯಿಂದ ಮಾಡುತ್ತಾರೆಂದು ಇವರು ಹೇಳಲಿ, ಇಲ್ಲವೆಂದರೆ ಲೋಕಾಯುಕ್ತಕ್ಕೆ ಕೊಡುತ್ತಾರಾ? ಇವರು ಹೇಳಲಿ.

ಡಾ: ಹೆಚ್.ಸಿ.ಮಹದೇವಪ್ಪ : ಲೋಕಾಯುಕ್ತಕ್ಕೆ ಕೊಡುವ ಪ್ರಶ್ನೆಯೇ ಇಲ್ಲ. ಅವರು ಕೇಳದೇ ಇದ್ದರೂ, enquiry ಮಾಡಿಸಿ report ಕೊಡುತ್ತೇವೆಂದು ನಾನೇ ಹೇಳುತ್ತಿದ್ದೇನೆ.

ಅಧ್ಯಕ್ಷರು : He is also serious in this matter.

ಡಾ: ಹೆಚ್.ಸಿ.ಮಹದೇವಪ್ಪ : Sir, I am telling Seriously,

(ಗೊಂದಲ)

ಶ್ರೀ ಹೆಚ್.ಸಿ.ಬಾಲಕೃಷ್ಣ : ನೀವು ಇಲ್ಲಿ ಕೆಲಸ ಮಾಡಿದವರು. ಅಧಿಕಾರಿಗಳು ಉದ್ಧಟತನದಿಂದ ನಡೆದುಕೊಂಡಾಗ...

(ಗೊಂದಲ)

ಶ್ರೀ ಹೆಚ್.ಸಿ.ಬಾಲಕೃಷ್ಣ : ನೀವು ಈ ಭಾಗದಲ್ಲಿದ್ದುಕೊಂಡು ಸರ್ಕಾರದ ವಿರುದ್ಧ ಚರ್ಚೆ ಮಾಡಿದ್ದೀರಿ.

ಡಾ: ಹೆಚ್.ಸಿ.ಮಹದೇವಪ್ಪ : ಅದನ್ನು ತನಿಖೆ ಮಾಡಿಸಿ, ವರದಿ ತರಿಸುತ್ತೇನೆಂದು ಹೇಳುತ್ತಿದ್ದೇನೆ.

ಅಧ್ಯಕ್ಷರು : ನಿಮ್ಮ concern ಏನಿದೆಯೋ ನಾನು ಹೇಳಿದ್ದೇನೆ. He will take serious action about this.

ಶ್ರೀ. ಡಿ.ನಾಗರಾಜಯ್ಯ : ಮಾನ್ಯ ಅಧ್ಯಕ್ಷರೆ, ಯಾರೋ ಕೂಲಿ ಮಾಡಿ ಜೀವನ ಮಾಡುವಂಥವರು ಮರಳನ್ನು ಕದ್ದು ಎಲ್ಲೋ ಗುಡ್ಡೆ ಹಾಕಿಕೊಂಡಿದ್ದಂಥ ಮರಳನ್ನು ನಮ್ಮ ಅಧಿಕಾರಿಗಳು ಹೊಗಿ seize ಮಾಡಿದರು. ಅವರಾದರೂ ಜೀವನ ಮಾಡುವುದಕ್ಕೋಸ್ಕರ ಕಳ್ಳತನ ಮಾಡಿದಂಥವರು. ಇವರು seize ಮಾಡುವುದಕ್ಕೆಂದು ಹೋಗಿ, ಸರ್ಕಾರಕ್ಕೆ ಹಣ ಕಟ್ಟುತ್ತೇವೆಂದು, ಹಣವನ್ನು ಕ್ರೋಢೀಕರಿಸುತ್ತೇವೆಂದು ಹೇಳಿ ಆ ರೈತರಿಂದ ಸೀಜ್ ಮಾಡಿದಂಥ ಮರಳನ್ನು ಕದ್ದು ಮಾರಾಟ ಮಾಡಿಕೊಂಡು, ಕೊಟ್ಟಿರುವಂಥ ವರದಿ ಸಹ ಸುಳ್ಳು ವರದಿ. ನಾಳೆ ಬೆಳಗ್ಗೆಯೇ ನೀವು ಸದನ ಸಮಿತಿಯನ್ನು ಸಹ ಕಳುಹಿಸಿ ಕೊಡಿ.Spot verify ಮಾಡಲಿ. Spot ನಲ್ಲಿ 1 ಕೆ.ಜಿ. ಮರಳುಇದೆಯೆಂದರೆ ನಾಳೆಯಿಂದ ನಾನು ಈ ಸದನಕ್ಕೇ ಕಾಲಿಡುವುದಿಲ್ಲ. ನಾನು ರಾಜೀನಾಮೆ ಕೊಡುತ್ತೇನೆ.

ಅಧ್ಯಕ್ಷರು : Please take serious note about this.

ಶ್ರೀ. ಡಿ.ನಾಗರಾಜಯ್ಯ : ಅವರು ಹೇಳಲಿ. . . .

ಡಾ: ಹೆಚ್.ಸಿ.ಮಹದೇವಪ್ಪ : ಯಾರೂ ರಾಜೀನಾಮೆ ಕೊಡಬೇಕಾಗಿಲ್ಲ. ತನಿಖೆ ಮಾಡಿ ವರದಿ ತರಿಸಿ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಹೆಚ್.ಸಿ.ಬಾಲಕೃಷ್ಣ : ಮಂತ್ರಿಗಳೇ, ನಿಮಗೆ ಲೆಟರ್ ಸಹ ಕೊಟ್ಟಿದ್ದಾರೆ.

ಡಾ: ಹೆಚ್.ಸಿ.ಮಹದೇವಪ್ಪ : ಆಯಿತು, ತನಿಖೆ ಮಾಡಿ ವರದಿ ತರಿಸಿಕೊಂಡು ನೀವು ಹೇಳುವುದರಲ್ಲಿ fact ಇದ್ದರೆ ಕ್ರಮ ತೆಗೆದುಕೊಳ್ಳುತ್ತೇನೆ.

ಡಾ: ಹೆಚ್.ಸಿ.ಮಹದೇವಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ರಾಜೀನಾಮೆ ಕೊಡಬೇಕಾಗಿಲ್ಲ. ತನಿಖೆ ಮಾಡಿ ವರದಿ ತರಿಸಿಕೊಂಡು ಕ್ರಮ ತೆಗೆದುಕೊಳ್ಳುತ್ತೇವೆ. ನೀವ್ಯಾಕೆ ಈಗ . . .

ಶ್ರೀ ಹೆಚ್.ಸಿ.ಬಾಲಕೃಷ್ಣ : ಮಂತ್ರಿಗಳೆ, ನಿಮಗೆ ಪತ್ರವನ್ನೂ ಕೂಡಾ ಕೊಟ್ಟಿದ್ದಾರೆ.

ಡಾ: ಹೆಚ್.ಸಿ.ಮಹದೇವಪ್ಪ : ತನಿಖೆ ಮಾಡಿ ವರದಿ ತರಿಸಿಕೊಂಡು ನೀವು ಹೇಳಿದ್ದರಲ್ಲಿ fact ಇದ್ದರೆ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳುತ್ತಿದ್ದೇನಲ್ಲ?

ಅಧ್ಯಕ್ಷರು : ನೀವು ಪತ್ರ ಕೊಟ್ಟಿದ್ದು ಯಾವತ್ತು?

ಶ್ರೀ ಡಿ.ನಾಗರಾಜಯ್ಯ : ನಾನು 3ನೇ ತಾರೀಖೇ ಪತ್ರವನ್ನು ಕೊಟ್ಟಿದ್ದೇನೆ.

ಡಾ: ಹೆಚ್.ಸಿ.ಮಹದೇವಪ್ಪ : ಮಾನ್ಯ ಅಧ್ಯಕ್ಷರೆ, I have already discussed it with Senior Officers. Senior Officers ಜೊತೆ discuss ಮಾಡಿದ್ದೇನೆ.

ಶ್ರೀ ಹೆಚ್.ಸಿ.ಬಾಲಕೃಷ್ಣ : ಉತ್ತರವನ್ನು ನೋಡಿ ಹೇಗೆ ಕೊಟ್ಟಿದ್ದಾರೆ? ಎಷ್ಟು ಚೆನ್ನಾಗಿದೆ!

ಅಧ್ಯಕ್ಷರು : This is enough. No further discussion, please

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ:– ಮಾನ್ಯ ಸಭಾಧ್ಯಕ್ಷರೆ, ನಾನೇನು ನಿಯಮ 60ರ ಅಡಿಯಲ್ಲಿ ಕೊಟ್ಟಿದ್ದೆ, ಅದನ್ನು ನಿಯಮ 69ಕ್ಕೆ convert ಮಾಡಿದ್ದಾರೆ.

7. ವಿಷಯ : **ಹಾಸನ ಜಿಲ್ಲೆಯ ಎ.ಪಿ.ಎಂಸಿ. ಮಾರುಕಟ್ಟೆಯಲ್ಲಿ ಕಳಪೆ ಮಟ್ಟದ ಆಲೂಗಡ್ಡೆ ಬೀಜವನ್ನು ರೈತರಿಗೆ ವಿತರಿಸಿರುವುದರ ಬಗ್ಗೆ.**

ಡಾ. ಶಾಮನೂರು ಶಿವಶಂಕರಪ್ಪ (ಮಾನ್ಯ ತೋಟಗಾರಿಕೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು):– ಮಾನ್ಯ ಅಧ್ಯಕ್ಷರೆ,

➢ ಹಾಸನ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯಲ್ಲಿ 2013–14ನೇ ಸಾಲಿನಲ್ಲಿ ಬಿತ್ತನೆ ಆಲೂಗಡ್ಡೆ ವಹಿವಾಟು ಮೇ–2013 ಮತ್ತು ಜೂನ್ 2013ರ ಮಾಹೆಯಲ್ಲಿ ನಡೆದಿರುತ್ತದೆ.

➢ ದಿನಾಂಕ : 13.05.2013 ರಿಂದ 31.05.2013ರವರೆಗೆ 26540.05 ಮೆ.ಟನ್ ಮತ್ತು ದಿನಾಂಕ : 01.06.2013 ರಿಂದ ದಿನಾಂಕ : 09.06.2013ರವರೆಗೆ 3457.00 ಮೆ.ಟನ್ ಮಾರಾಟ ವಾಗಿದ್ದು, ಒಟ್ಟು 29,997.05 ಮೆ.ಟನ್ ಬಿತ್ತನೆ ಆಲೂಗಡ್ಡೆ ಮಾರಾಟವಾಗಿದೆ.

➢ ಬಿತ್ತನೆ ಆಲೂಗಡ್ಡೆಯನ್ನು 42.000 ರೈತರು ಖರೀದಿ ಮಾಡಿರುತ್ತಾರೆ.

➢ ಮೇ ತಿಂಗಳಲ್ಲಿ ಬಿತ್ತನೆ ಮಾಡಿದ ಕೆಲವು ರೈತರು ಆಲೂಗಡ್ಡೆ ಕರಗಿದೆ ಎಂದು ಹಾಸನ ಜಿಲ್ಲೆಯ ವಿವಿಧ ಭಾಗಗಳಿಂದ ದೂರು ನೀಡಿರುತ್ತಾರೆ.